ಶ್ರೀ ಪಿ. ರಮೇಶ. : ತಾಲ್ಲೂಕ್ ಹೆಡ್ ಕ್ವಾರ್ಟರ್ಸ್‌ನಲ್ಲಿ ಕಟ್ಟಿದ್ದವು ಆಗಿದ್ದರೂ ಸಹ ಇವು ಜಿಲ್ಲಾ ಪಂಚಾಯಿತಿಯಿಂದ ಪ್ರಾರಂಭವಾಗುತ್ತದೆ. ಸರ್ಕಾರದಿಂದ ಇದರ ಬಗ್ಗೆ ಒಂದು ಆದೇಶ ಕಳುಹಿಸಿದರೆ ಆ ಅಧಿಕಾರಿಗಳು ಬೇಗ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ತಾಲ್ಲೂಕಿನಲ್ಲಿ ಯಾವುದಾದರೊಂದನ್ನು ಪೂರ್ತಿಗೊಳಿಸುವುದಕ್ಕೆ ತಾವು ಬರೆದು ಕೊಟ್ಟರೆ, ಅದಕ್ಕೆ ಬೇಕಾದ ಉಳಿದ ಹಣವನ್ನು ನಾನು ಕೊಡುತ್ತೇನೆ.

ಧಾರವಾಡ ವಿಧಾನ ಸಭಾ ಕ್ಷೇತ್ರದಲ್ಲಿ ಕೊರೆಯಿಸಲಾದ ಕೊಳವೆ ಬಾವಿಗಳ ಸಂಖ್ಯೆ

264 (2468) : ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಧಾರವಾಡ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೊರೆಯಿಸಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

(ವರ್ಷಾವಾರು ವಿವರ ಒದಗಿಸುವುದು)

(ಆ) ಅವುಗಳ ಪೈಕಿ ನೀರು ದೊರಕದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು? ವಿಫಲಗೊಂಡ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) 78

ವರ್ಷಾವಾರು ವಿವರ

1.	1997-98	11
2.	1998-99	43
3.	1999-2000	24
	ಒಟ್ಟು	78

(ಆ) 77

ವಿಫಲಗೊಂಡ ಕೊಳವೆ ಬಾವಿ 01

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ನನ್ನ ಧಾರವಾಡ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೊರೆಯಿಸಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೇನೆ. ಇದಲ್ಲದೆ ಇದಕ್ಕೆ ಸರಿಯಾದ ವರ್ಷಾವಾರು ವಿವರಗಳನ್ನು ಕೊಡಿ ಎಂದು ಕೇಳಿದ್ದೇನೆ. ಅವರು ಬರೀ ಸಂಖ್ಯೆಯನ್ನು

ಅಷ್ಟೆ ಕೊಟ್ಟಿದ್ದಾರೆ. ಎಲ್ಲೆಲ್ಲಿ ತೆಗೆಸಿದ್ದಾರೆ ಎನ್ನುವ ಬಗ್ಗೆ ವಿವರವನ್ನು ಕೊಡಲಿಲ್ಲ. ಅದನ್ನು ಏಕೆ ಕೊಡಲಿಲ್ಲ? ಅದರ ಬಗ್ಗೆ ಸರಿಯಾದ ವಿವರವನ್ನು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ. 1977 ರಲ್ಲಿ ತೆಗೆಸಿರುವಂತಹ ಎಲ್ಲ ಕೊಳವೆ ಬಾವಿಗಳಲ್ಲಿ ಸರಿಯಾಗಿ ನೀರು ಬಿದ್ದಿವೆ ಎಂದು ಹೇಳುತ್ತಿದ್ದಾರೆ. ಒಂದೇ ಒಂದು ಕೊಳವೆ ಬಾವಿ ವಿಫಲವಾಗಿದೆ ಎಂದು ಹೇಳುತ್ತಿದ್ದಾರೆ. ಇದಕ್ಕೆ ಸರಿಯಾದ ಮಾಹಿತಿಯನ್ನು ಒದಗಿಸಿರುವುದಿಲ್ಲ. ಇವತ್ತು ಧಾರವಾಡ ನಗರದಲ್ಲಿ ನೀರಿನ ಹಾಹಾಕಾರ ಏಳುತ್ತಿದೆ, ಗಲಭೆ ಕೂಡ ಏಳುತ್ತಿದೆ, ಜನರು ಕುಡಿಯುವ ನೀರಿನ ಸಲುವಾಗಿ ದೊಡ್ಡ ಪ್ರಮಾಣದಲ್ಲಿ ಗಲಾಟೆಯನ್ನು ಮಾಡುತ್ತಿದ್ದಾರೆ. ಇವರು ಕೊಡುತ್ತಿರುವ ಮಾಹಿತಿ ಸರಿಯಾದುದಲ್ಲ. ಧಾರವಾಡದಲ್ಲಿ ಇವತ್ತು ಕುಡಿಯುವ ನೀರಿನ ಒಂದು ದೊಡ್ಡ ಬವಣೆ ಇದೆ, ಇರುವಂತಹ ಆ ಬಾವಿಗಳನ್ನು ಎಲ್ಲಾ ಮುಚ್ಚಿಹಾಕಿಬಿಟ್ಟಿದ್ದಾರೆ. ಇವತ್ತು ಎಷ್ಟೋ ಬಾವಿಗಳಲ್ಲಿ ನೀರು ಇಲ್ಲ, ಧಾರವಾಡ ನಗರದಲ್ಲಿ 11 ಕೆರೆಗಳು ಇದ್ದು ಅವು ಇವತ್ತು ಪೂರ್ತಿ ಬತ್ತಿ ಹೋಗಿವೆ. ಅಲ್ಲಿ ಕೊರೆದಂಥ ಕೊಳವೆ ಬಾವಿಗಳಲ್ಲಿ ನೀರು ಇದೆ ಎಂದು ಹೇಳುತ್ತಿರುವ ಈ ಮಾಹಿತಿ ಸರಿಯಾದುದು ಅಲ್ಲವೆಂದು ನಾನು ಹೇಳುತ್ತೇನೆ. ಅವರು ಸರಿಯಾದ ಮಾಹಿತಿಯನ್ನು ಒದಗಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಶಾಸಕರಾದ ಶ್ರೀ ಬೆಲ್ಲದ್‌ರವರು ಈ ಬೋರ್‌ವೆಲ್ ಬಗ್ಗೆ ಕೇಳಿದರು. ಧಾರವಾಡ ಹಾಗೂ ಹುಬ್ಬಳ್ಳಿ ನಗರಗಳಲ್ಲಿ ಕುಡಿಯುವ ನೀರಿನ ಹಾಹಾಕಾರದ ಬಗ್ಗೆ ಕೇಳಿದ್ದಾರೆ. ಒಂದು ವರ್ಷದ ಹಿಂದೆ 35 ಕೋಟಿ ರೂಪಾಯಿಗಳ ಪ್ರಪೋಜಲ್ ಬಂದಿರುತ್ತದೆ. ಸವದತ್ತಿಯಿಂದ ಧಾರವಾಡದವರೆಗೆ ಪೈಪ್‌ಲೈನ್ ಹಾಕಿದ್ದಾರೆ, ಮಲಪ್ರಭಾ ಯೋಜನೆಯಲ್ಲಿ ಹಾಕಿದ ಪೈಪ್‌ಲೈನ್‌ಗಳು ಸೋರಿ ಹೋಗುತ್ತಿವೆ. ಅದನ್ನು ರೀಪ್ಲೇಸ್ ಮಾಡಿ ಕೆಲವೊಂದು ಕಡೆ ಓವರ್‌ಹೆಡ್ ಟ್ಯಾಂಕ್ ಮಾಡಿ ನೀರನ್ನು ಸಪ್ಲೈ ಮಾಡಬೇಕು. 35 ಕೋಟಿ ರೂಪಾಯಿಗಳ ಒಂದು ಯೋಜನೆ, ಇದನ್ನು ಸರಿ ಮಾಡುವ ಸಲುವಾಗಿ ಬಂದಿರುತ್ತದೆ, ಅದು ಇನ್ನುವರೆಗೆ ಸರ್ಕಾರದಿಂದ ಮಂಜೂರಾಗಿರುವುದಿಲ್ಲ. ಏಕೆ ಮಂಜೂರಾಗಿರುವುದಿಲ್ಲವೆನ್ನುವುದು ಒಂದು ಪ್ರಶ್ನೆಯಾಗಿದೆ. ಇದರ ಬಗ್ಗೆ ಮಾಧ್ಯಮಗಳಲ್ಲಿ ಹಾಗೂ ಒಂದು ಪತ್ರಿಕೆಯ ಎಡಿಟರ್ಸ್ ಕಾಲ್‌ಂನಲ್ಲಿ ಬಂದಿದೆ. ಹುಬ್ಬಳ್ಳಿ-ಧಾರವಾಡದಲ್ಲಿ ಕುಡಿಯುವ ನೀರಿನ ಹಾಹಾಕಾರದ ಬಗ್ಗೆ ವಿಚಾರ ಬಂದಿರುತ್ತದೆ. ಈ 35 ಕೋಟಿ ರೂಪಾಯಿಗಳ ಯೋಜನೆಯನ್ನು ಯಾವಾಗ ಮಂಜೂರು ಮಾಡುತ್ತೀರಿ? ಯಾವಾಗ ಆ ಕೆಲಸವನ್ನು ಪ್ರಾರಂಭ ಮಾಡುತ್ತೀರಿ? ಇದು ಅತಿ ಅವಶ್ಯಕವಾಗಿ ಆಗಬೇಕಾಗಿದ್ದು ಇದು ಆಗದಿದ್ದರೆ ಒಂದೆರಡು ತಿಂಗಳಲ್ಲಿ ಅಲ್ಲಿ ನೀರಿನ ಹಾಹಾಕಾರ ಉಂಟಾಗುತ್ತದೆ. ಹುಬ್ಬಳ್ಳಿ-ಧಾರವಾಡದಲ್ಲಿ ಒಂದು ದೊಡ್ಡ ಕ್ಷೋಭೆ ಆಗುತ್ತದೆ. ಈಗ 8-10 ದಿವಸಕ್ಕೆ ಒಂದು ಸಲ ನೀರು ಬರುತ್ತದೆ. ಶ್ರೀ ಹೆಚ್. ಕೆ. ಪಾಟೀಲರು, ಹಾಗೂ ಶ್ರೀ ಎ. ಎಸ್. ಹಿಂಡಸ್‌ಗೇರಿಯವರು ಜಿಲ್ಲಾ ಮಂತ್ರಿಗಳಾಗಿದ್ದು ಹಾಗೂ ನಾನು ವಿರೋಧ ಪಕ್ಷದ ನಾಯಕನಾಗಿದ್ದು ಹೀಗೆ ಮೂರು ನಾಯಕರು ಇರುವಂತಹ ಜಿಲ್ಲೆಯಲ್ಲಿ ಕೂಡ ಇಂತಹ ನೀರಿನ ಪರಿಸ್ಥಿತಿ ಇದೆ ಎಂದು ಪತ್ರಿಕೆಯವರು ಬರೆದಿದ್ದಾರೆ. ಇನ್ನು ಬೇರೆ ಕಡೆ ನೀರಿನ ಪರಿಸ್ಥಿತಿ ಇರಬಹುದು? ಅದಕ್ಕಾಗಿ ಮಾನ್ಯ ಸಚಿವರು ಇದರ ಬಗ್ಗೆ ಗಮನವನ್ನು ಹರಿಸಬೇಕು. ಬೋರ್‌ವೆಲ್ ಬಗ್ಗೆ ಹೆಚ್ಚು ಕಡಿಮೆ ಹಾಕುವುದಾಗಬಹುದು, ಇದನ್ನು ಬಿಡಿ; ಈ 35 ಕೋಟಿ

ರೂಪಾಯಿಗಳ ಯೋಜನೆ ಏನಿದೆ ಅದನ್ನು ಮಾಡಿದರೆ ಖಾಯಂ ಪರಿಹಾರ ಸಿಗುತ್ತದೆ, ಇದನ್ನು ಯಾವಾಗ ಮಂಜೂರು ಮಾಡುತ್ತೀರಿ ಎನ್ನುವುದನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಶ್ರೀ ಬೆಲ್ಲದ್‌ರವರು ಕೇಳಿರುವ ಪ್ರಶ್ನೆಯಲ್ಲಿ ಎರಡು ಅಂಶಗಳನ್ನು ಹೇಳಬೇಕಾಗಿದೆ. ತಾತ್ಪೂರ್ತಿಕವಾಗಿ ನಾವು ಬೋರ್‌ವೆಲ್ ಏನು ಹಾಕಿದ್ದೇವೆ ಅದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಇನ್ನೊಂದು ನಮ್ಮ ಜಗದೀಶ್‌ಶೆಟ್ಟರವರು ಅಲ್ಲಿ ನೀರಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ, ಇದರ ಬಗ್ಗೆ ಶಾಶ್ವತವಾದ ಒಂದು ಪರಿಹಾರವಾಗಬೇಕೆಂದು ಕೇಳಿದ್ದಾರೆ. ಮಾನ್ಯ ಬೆಲ್ಲದ್‌ರವರು ಹೇಳಿದಂತೆ ನಾವು ಬೋರ್‌ವೆಲ್‌ಗಳನ್ನು ಈಗಾಗಲೇ ಹಾಕಿದ್ದೇವೆ. ತಮ್ಮ ಕ್ಷೇತ್ರದ 22 ವಾರ್ಡ್‌ಗಳಲ್ಲಿ ಎಲ್ಲೆಲ್ಲಿ ಬೋರ್‌ವೆಲ್‌ಗಳನ್ನು ಹಾಕಿದ್ದೇವೆ ಎನ್ನುವ ಬಗ್ಗೆ ತಮಗೆ ಇಲ್ಲಿಯೇ ಒಂದು ಯಾದಿಯನ್ನು ಕೊಡುತ್ತೇನೆ. ಈ 78 ಬೋರ್‌ವೆಲ್‌ಗಳ ಯಾದಿ ಓದಬೇಕಾದರೆ ಅರ್ಧ ಗಂಟೆ ಸಮಯವಾಗುತ್ತದೆ. 1997-98 ರಲ್ಲಿ ಹಾಕಿರುವ ಬೋರ್‌ವೆಲ್‌ಗಳು 11, ಇದಕ್ಕೆ 11 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1998-99 ರಲ್ಲಿ 43 ಬೋರ್‌ವೆಲ್‌ಗಳನ್ನು ಹಾಕಿದ್ದೇವೆ, 25 ಲಕ್ಷ 80 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1999-2000ಕ್ಕೆ 14 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಸುಮಾರು 78 ಬೋರ್‌ವೆಲ್‌ಗಳಿಗೆ 46 ಲಕ್ಷ 80 ಸಾವಿರ ರೂಪಾಯಿಗಳನ್ನು ನಾವು ಖರ್ಚು ಮಾಡಿರುತ್ತೇವೆ. ನಾವು ಬರ ಪರಿಹಾರ ಯೋಜನೆ ಅಡಿಯಲ್ಲಿ ಆ ನಿಧಿಯಿಂದ ಇನ್ನು 22 ವಾರ್ಡ್‌ಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕತಕ್ಕಂಥ ಯೋಜನೆಯನ್ನು ಕೈಗೊಂಡಿದ್ದೇವೆ. ಜಿಲ್ಲಾಧಿಕಾರಿಗಳಿಗೆ ಈಗಾಗಲೇ ನಮ್ಮ ಬರ ಪರಿಹಾರ ನಿಧಿಯಿಂದ ಸುಮಾರು 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಬೋರ್‌ವೆಲ್ ಹಾಕುವ ಸಲುವಾಗಿ ಟೆಂಡರ್ ಕರೆದು ಬೋರ್‌ವೆಲ್‌ಗಳ ಮೂಲಕ ಒಂದು ತಾತ್ಪೂರ್ತಿಕ ಆಧಾರದ ಮೇಲೆ ನೀರಿನ ತೊಂದರೆಯನ್ನು ಪರಿಹಾರ ಮಾಡತಕ್ಕಂಥ ಕಾರ್ಯಕ್ರಮವನ್ನು ನಾವು ಹಮ್ಮಿಕೊಳ್ಳುತ್ತೇವೆ. ಅದರ ಜೊತೆಗೆ ಬಹಳ ಮುಖ್ಯವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶಾಸಕರು ಹೇಳಿದಂತೆ, ಅನೇಕ ಘಟಾನುಘಟಿಗಳನ್ನು ಹೊಂದಿದಂತಹ ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಆ ಯೋಜನೆಯನ್ನು ಕಾರ್ಯಗತ ಮಾಡದೆ ಇದ್ದದ್ದು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಕೂಡ ಓದಿದ್ದೇನೆ. ಆ ಸನ್ನಿವೇಶ ನಮ್ಮ ಸರ್ಕಾರಕ್ಕೆ ಆಗಬಾರದೆಂದು ಹೇಳಿ, ಅಲ್ಲಿ ಇರತಕ್ಕಂಥ ಗಂಭೀರವಾದ ಪರಿಸ್ಥಿತಿ ಏನಿದೆ ಅದು ಸರ್ಕಾರಕ್ಕೆ ಕೂಡ ಮನವರಿಕೆ ಆಗಿದೆ. ಸುಮಾರು 3-4 ದಿನಗಳಿಗೆ ಒಂದು ಸಲ ನೀರನ್ನು ಕೊಡುವಂತಹ ಪರಿಸ್ಥಿತಿ ಇವತ್ತು ಇದೆ. ಅಲ್ಲಿ ಪೈಪ್‌ಲೈನ್ ಕೂಡ ಹಾಕಿದ್ದಾರೆ, 300 ಕಡೆ ಪೈಪ್ ಹೊಡೆದಿದ್ದು ನಮಗೆ13 ಎಂಜಿಡಿ ನೀರು ಬರಬೇಕಾಗಿದ್ದು ಕೇವಲ 8 ಎಂಜಿಡಿ ನೀರು ಬರುತ್ತದೆ. ಇದರಿಂದ ಯಾವ ಪ್ರದೇಶಕ್ಕೂ ಕೂಡ ಸರಿಯಾದ ರೀತಿಯಲ್ಲಿ ನೀರು ಕೊಡುವಂಥ ಪರಿಸ್ಥಿತಿ ಇರುವುದಿಲ್ಲ. ಇದನ್ನು ಸರ್ಕಾರ ಮನವರಿಕೆ ಮಾಡಿಕೊಂಡು ತೀವ್ರಗತಿಯಿಂದ ಅಂದರೆ, 15 ಅಥವಾ ತಿಂಗಳಲ್ಲಿ 35 ಕೋಟಿ ರೂಪಾಯಿಗಳ ಯೋಜನೆ ಏನಿದೆ, ಅದನ್ನು ಮಂಜೂರು ಮಾಡುವುದಕ್ಕೆ ನಾನು ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : 35 ಕೋಟಿ ರೂಪಾಯಿಗಳ ಒಂದು ಯೋಜನೆ ಬಂದು ಒಂದು ವರ್ಷವಾಯಿತು. 15 ದಿವಸಗಳಲ್ಲಿ ಮಂಜೂರು ಮಾಡುತ್ತೇನೆಂದು ಹೇಳುತ್ತಿದ್ದಾರೆ,

ಅದನ್ನು ಮಂಜೂರು ಮಾಡಿ ಇಂಪ್ಲಿಮೆಂಟ್ ಮಾಡುವುದರೊಳಗಾಗಿ ಬೇಸಿಗೆ ಬರುತ್ತದೆ. ನೀರಿಗಾಗಿ ಹಾಹಾಕಾರವಾಗಿ ಕ್ಷೋಭೆಯಾಗುತ್ತಿದೆ. ಕ್ಯಾಬಿನೆಟ್ ಮೀಟಿಂಗ್ ಪ್ರತಿ ವಾರವು ನಡೆಯುತ್ತಿದೆ. ಇವತ್ತು ಸಹ ಇದ್ದು, ಹೋದವಾರವು ಸಹ ಕ್ಯಾಬಿನೆಟ್ ಸಭೆ ನಡೆಯಿತು. ನಾನು ಈ ಪ್ರಸ್ತಾವನೆಯನ್ನು ಹೇಳಿ ಸುಮಾರು 3 ತಿಂಗಳಾಯಿತು, ಆ ಪ್ರಸ್ತಾವನೆಯು ಬಂದು ಒಂದು ವರ್ಷವಾಯಿತು. ಇದು ಏಕೆ ಲೇಟಾಗುತ್ತಿದೆ? ಇವತ್ತು ಬೆಂಗಳೂರು ನಗರಕ್ಕೆ ಎಲ್ಲಾ ದೃಷ್ಟಿಯಿಂದ, ರಸ್ತೆಗಾಗಿ, ನೀರಿಗಾಗಿ ಸಾಕಷ್ಟು ಹಣವನ್ನು ಕೊಡುತ್ತಿದ್ದಾರೆ. ಈ ಹುಬ್ಬಳ್ಳಿ-ಧಾರವಾಡ ಮಹಾನಗರ ಕರ್ನಾಟಕದಲ್ಲಿ ದೊಡ್ಡ ಎರಡನೆಯ ಮಹಾನಗರವಾಗಿದೆ. ಇದಕ್ಕೆ ಏಕೆ ಈ ರೀತಿಯಾಗಿ ನಿರ್ಲಕ್ಷ್ಯ ಮಾಡುತ್ತಿದ್ದಾರೆ? ಈ ಮಹಾನಗರದಲ್ಲಿ ಜನತಾದಳದವರು ಮೇಯರ್ ಆಗಿದ್ದಾರೆ, ಅವರ ಸಲುವಾಗಿಯೇ ಕಾಂಗ್ರೆಸ್ ಪಕ್ಷದವರು 35 ಕೋಟಿ ರೂಪಾಯಿಗಳನ್ನು ಮಂಜೂರು ಮಾಡುತ್ತಿಲ್ಲವೇನೂ ಎನ್ನುವಂತಹ ಸುದ್ದಿಗಳು ಪತ್ರಿಕೆಯಲ್ಲಿ ಬರುತ್ತಿದೆ. ನಾವು ಇದಕ್ಕೆ ಸಪೋರ್ಟನ್ನು ಕೊಡುವುದಿಲ್ಲ, ಈ ಮಹಾನಗರ ಜನತೆಗೆ ಅನುಕೂಲ ಮಾಡಿಕೊಡುವ ದೃಷ್ಟಿಯ ಬಗ್ಗೆ ನಮಗೆ ಕಾಳಜಿ ಇದೆ. ಇವತ್ತು ಪತ್ರಿಕೆಗಳಲ್ಲಿ ಹಲವಾರು ಸುದ್ದಿಗಳು ಬರುತ್ತಿವೆ. ಈ ರೀತಿಯಾಗಿ ತಾವು ನಿಧಾನ ಮಾಡುತ್ತಾ ಹೋದರೆ ಇಂತಹ ಕಡೆಗಳು ಹೆಚ್ಚು ಹೆಚ್ಚಾಗಿ ಬರುತ್ತಾ ಇರುತ್ತದೆ. ಅಲ್ಲಿ ಜನತಾದಳದವರು ಮೇಯರ್ ಇದ್ದಾರೆ, ನಾಳೆ ದಿನ ಅಲ್ಲಿ ಚುನಾವಣೆ ನಡೆದು ಕಾಂಗ್ರೆಸ್ ಪಕ್ಷದವರು ಮೇಯರ್ ಆದರೆ ಹಣವನ್ನು ಮಂಜೂರು ಮಾಡುತ್ತಾರೆಂದು ಹೇಳುವ ಸುದ್ದಿಗಳು ಪತ್ರಿಕೆಯಲ್ಲಿ ಬರುತ್ತಿದೆ. ಇದಕ್ಕೆ ತಾವು ಅವಕಾಶವನ್ನು ಕೊಡಬೇಡಿ. ತಾವು ದಯವಿಟ್ಟು ಜನರ ಹಿತರಕ್ಷಣೆಯನ್ನು ನೋಡಬೇಕಾಗಿದೆ, ಇದು ತುರ್ತಾಗಿ ಆಗಬೇಕಾದ ಕೆಲಸವಾಗಿದೆ. 15 ದಿವಸ, ಒಂದು ತಿಂಗಳು ಎಂದು ಹೇಳುತ್ತಾ ಹೋಗಬೇಡಿ. ಈ ಕೆಲಸಗಳು ಈ ವಾರದಲ್ಲಿ ಅಂದರೆ ಇನ್ನು ಎರಡು ದಿವಸಗಳಲ್ಲಿ ಆಗಬೇಕೆನ್ನುವ ನಿರ್ಧಾರವನ್ನು ತೆಗೆದುಕೊಳ್ಳಬೇಕು.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಮಲಪ್ರಭಾ ನದಿಯ ನೀರು ಏನಿದೆ ಅದು ಸವದತ್ತಿಯಿಂದ ಧಾರವಾಡಕ್ಕೆ ಬರುವುದು. ಈ ಯೋಜನೆಯು 1983 ರಿಂದ ಪ್ರಾರಂಭವಾಗಿದೆ, ಆವತ್ತಿನಿಂದ ಸೋರುವಿಕೆಯು ಪ್ರಾರಂಭವಾಗಿದೆ. ಆದರೆ ಪ್ರತಿವರ್ಷವು ಅದರ ಸೋರುವಿಕೆ ಹೆಚ್ಚುತ್ತಿದೆ, ಇವತ್ತಿನ ದಿವಸ ಯುದ್ಧೋಪಾದಿಯಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡಬೇಕು. ಹುಬ್ಬಳ್ಳಿ-ಧಾರವಾಡದಲ್ಲಿ ಕುಡಿಯುವ ನೀರಿನ ಬವಣೆಯಿಂದ ಬಹಳ ದೊಡ್ಡ ಸಮಸ್ಯೆ ಉಂಟಾಗಿದೆ. ಯಾವುದೇ ಕಾರಣದಿಂದ ಈ ಕೆಲಸಗಳು ವಿಳಂಬವಾಗಬಾರದು. ಆದ್ದರಿಂದ 35 ಕೋಟಿ ರೂಪಾಯಿಗಳನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕೆಂದು ಕೇಳುತ್ತೇನೆ. ಅಲ್ಲಿ ಓವರ್‌ಹೆಡ್ ಟ್ಯಾಂಕ್‌ನ್ನು ಮಾಡಬೇಕಾಗಿದೆ, ಅಲ್ಲಿ ಸಿ. ಐ. ಪೈಪ್‌ಲೈನ್ ಸಹ ಬರಬೇಕಾಗಿದೆ. ಅಲ್ಲಿ ಅಂಡರ್‌ಗ್ರೌಂಡ್ ಪೈಪ್‌ಲೈನ್‌ನ್ನು ಹಾಕಿರುವುದರಲ್ಲಿ ಬಹಳ ದೋಷವಿರುತ್ತದೆ. ನಾನು 1985 ರಿಂದ ಇದರ ಬಗ್ಗೆ ಕೂಗಿ ಹೇಳುತ್ತಿದ್ದೇನೆ. ಇವತ್ತಿನ ದಿವಸ ಇಂಜಿನಿಯರ್‌ಗಳು ಮಾಡಿದ ದೋಷದಿಂದ ನಾವು ಅಲ್ಲಿ ನೀರಿನ ಬವಣೆಯನ್ನು ಅನುಭವಿಸುತ್ತಿದ್ದೇವೆ. ಮಲಪ್ರಭಾ ನದಿಯಲ್ಲಿ ಸಾಕಷ್ಟು ನೀರು ಇದ್ದರೂ ಸಹ, ಈ ಸೋರುವಿಕೆಯಿಂದಾಗಿ ನಾವು ಬವಣೆಯನ್ನು ಅನುಭವಿಸುತ್ತಿದ್ದೇವೆ. ನಮ್ಮ ಹುಬ್ಬಳ್ಳಿ-ಧಾರವಾಡ ಯಾವುದೇ ಕೆರೆಗಳು ಸಹ ಇಲ್ಲ. ಇವತ್ತು

ಅಲ್ಲಿ ಬೋರ್‌ವೆಲ್‌ನ್ನು ತೋಡಿದರೂ ಸಹ ಅಲ್ಲಿ ನೀರು ಬರುವ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ಈ ಕೆಲಸವನ್ನು ಯುದ್ಧೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕು. ಈಗ ಸರ್ಕಾರದವರು ಡಿಸಿಯವರಿಗೆ ಈ ಕೆಲಸದ ಬಗ್ಗೆ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ, ತುರ್ತಾಗಿ ಬೋರ್‌ವೆಲ್‌ನ್ನು ಹಾಕುವುದಕ್ಕೆ ಈ ಹಣವು ಸಾಕಾಗುವುದಿಲ್ಲ. ನನ್ನ ಕ್ಷೇತ್ರದಲ್ಲಿ 23 ವಾರ್ಡ್‌ಗಳು ಇದೆ. ವಾರ್ಡ್‌ಗೆ ಒಂದು ಬೋರ್‌ವೆಲ್ ಹಾಕಿದರೂ ಸಹ ಸಾಕಾಗುವುದಿಲ್ಲ. ನಮ್ಮ ಕಾರ್ಪೋರೇಷನ್‌ನಲ್ಲಿ ದೊಡ್ಡ ದೊಡ್ಡ ವಾರ್ಡ್‌ಗಳು ಸಹ ಬರುತ್ತದೆ. ಇವತ್ತಿನ ದಿವಸ ಒಂದೊಂದು ವಾರ್ಡ್‌ಗೆ ಕನಿಷ್ಠ 3 ಬೋರ್‌ವೆಲ್‌ಗಳನ್ನು ಹಾಕಬೇಕಾದಂತಹ ಪರಿಸ್ಥಿತಿ ಇದೆ; ಅದಕ್ಕಾಗಿ ಸರ್ಕಾರ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಈ ಕೆಲಸಕ್ಕಾಗಿ ತಾವು 35 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಪೈಪ್‌ಲೈನ್ ಕೆಲಸವನ್ನು ಯುದ್ಧೋಪಾದಿಯಲ್ಲಿ ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಕೇಳುತ್ತಿದ್ದೇನೆ, ಇದಕ್ಕೆ ಸರಿಯಾದಂತಹ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕಾಗುತ್ತದೆ.

ಶ್ರೀ ಹೆಚ್. ಜಿ. ಹಯಾತ್‌ಖಾನ್ : ಮಾನ್ಯ ಅಧ್ಯಕ್ಷರೆ, 35 ಕೋಟಿ ರೂಪಾಯಿಗಳಲ್ಲಿ ಸರ್ಕಾರವು ಬಿಡುಗಡೆ ಮಾಡಿರುವ ಹಣ ಕೇವಲ 7 $^{1}/_{2}$ ಕೋಟಿ ರೂಪಾಯಿಗಳು ಮಾತ್ರ. ನಾನು 3 ತಿಂಗಳಿನಿಂದ ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದರೂ ಸಹ, ಅವರು ಇವತ್ತು, ನಾಳೆ ಎಂದು ಹೇಳಿಕೊಂಡು ಹೋದರು ಈ ಬೇಸಿಗೆಯ ಕಾಲದಲ್ಲಿ ಜನರು ಅಲ್ಲಿ ಇರುವುದಕ್ಕೆ ಸಾಧ್ಯವಿಲ್ಲ; ಜನರು ಊರನ್ನು ಬಿಡುವುದಕ್ಕೆ ತಯಾರಿ ನಡೆಸಿದ್ದಾರೆ. ಈ 35 ಕೋಟಿ ರೂಪಾಯಿಗಳಲ್ಲಿ ಸರ್ಕಾರ ಕೊಟ್ಟಿರುವುದು ಕೇವಲ 7 $^{1}/_{2}$ ಕೋಟಿ ರೂಪಾಯಿಗಳು, 20 ಪರ್ಸೆಂಟ್ ಹಣವನ್ನು ತಡ ಮಾಡಿದರೆ ಮುಂದಿನ ಗತಿ ಏನು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಎಲ್ಲಾ ಮಾನ್ಯ ಸದಸ್ಯರುಗಳು ಆಗ್ರಹ ಪೂರ್ವಕವಾಗಿ ಅದಷ್ಟು ಶೀಘ್ರವಾಗಿ ಈ ಕೆಲಸವಾಗಬೇಕೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಮುಂದಿನ ಕ್ಯಾಬಿನೆಟ್‌ನಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ ಮೇಲೆ ಅದಕ್ಕೆ ಮಂಜೂರಾತಿಯನ್ನು ಮಾಡುತ್ತೇವೆ.

ಒಂದೇ ಕಡೆ ಕಾರ್ಯ ನಿರ್ವಹಿಸುವ ಅಧಿಕಾರಿಗಳ ವರ್ಗಾವಣೆ

265 (2445) : ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ್) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ನಗರದಲ್ಲಿರುವ ರೇಷ್ಮೆ ಇಲಾಖೆಯ ವಿವಿಧ ಕಛೇರಿಗಳಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಸುಮಾರು 5 ರಿಂದ 10 ಮತ್ತು 10 ರಿಂದ 20 ವರ್ಷಗಳ ಕಾಲ ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು? (ವರ್ಗವಾರು, ಹುದ್ದೆವಾರು, ಹೆಸರು ವಿವರ ಒದಗಿಸುವುದು)

(ಆ) ಕೆಲವೊಂದು ಅಧಿಕಾರಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಿದ್ದಾಗ್ಯೂ ಅನ್ಯ ಕರ್ತವ್ಯದ ಮೇಲೆ ಪುನಃ ಬೆಂಗಳೂರು ನಗರದಲ್ಲಿರುವ ಕಛೇರಿಗಳಿಗೆ ನಿಯೋಜಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?